(SRI M. C. SHIVANANDA SARMA).

(c) the quantity actually got (the difference whether more or less to be mentioned);

(d) whether *iluvaries* were fixed arbitrarily or on the basis of tests conducted;

(e) if *iluvaries* have been conducted when and where they were done, by whom and the result?

A.—**The Hon'ble Sri T. MARIAPPA** (Home Minister):—

(a), (b) and (c) The statistics asked for cannot readily be compiled.

(d) *Iluvaries* are fixed with reference to milling tests and averages obtained and on the basis of yields for similar varieties of paddy in other mills in the area.

(e) Tests were conducted by Sub-Division Officers, the Financial Assistant, Food Assistant, Amildars, and the Officer-in-charge, Government Central Depot, Mysore. Results of *iluvary* tests correspond generally to *iluvaries* fixed over the several quarters.

Mr. SPEAKER.—Next question. Sri Kadidal Manjappa.

Underground drainage scheme to Shimoga Town

*Q.—181. **Sri Kadidal MANJAPPA** (Shimoga District—General).—

Will the Government be pleased to state:—

(a) the date on which the underground drainage scheme to Shimoga Town was sanctioned;

(b) the work done so far;

(c) whether it has come to their notice that the work is stopped since the last one year; if so, the reasons?

A.—**The Hon'ble Sri T. MARIAPPA** (Home Minister).—

(a) The scheme was sanctioned administratively on 28th May 1946, and technically on 31st March 1947.

(b) The Scheme sanctioned comprises the following items:—

Construction of—

1. Main Sewer.
2. Street Sewer.
3. Surface Drains in poorer localities.
4. Construction of Septic tanks and other allied works.

With regard to the main sewers, fresh tenders have just been received.

The construction of street sewers is nearing completion and the work of surface drains has been deferred.

The septic tank work has not been taken up as the land for locating the septic tank is not yet acquired.

(c) *Vide* reply to (b) above.

Mr. SPEAKER.—Next question. Sri L. H. Thimma Boyi.

Amenities to labourers working in Lakkavalli Project.

* ಪ್ರಶ್ನೆ 222.—ಶ್ರೀ ಎಲ್. ಎಚ್. ತಿಮ್ಮಾಬೋಯಿ ಅವರು (ಚಿಕ್ಕಮಗಳೂರು—ನಿಮ್ನ ತರಗತಿಗಳವರ ಪರವಾಗಿ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ.—

(a) ಲಕ್ಕವಳ್ಳಿ ಯೋಜನೆಯ ಸಂಬಂಧದಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಸಂಖ್ಯೆ ಎಷ್ಟು;

(b) ಅವರ ಪೈಕಿ ಲಕ್ಕವಳ್ಳಿಯಲ್ಲಿಯೇ ವಾಸವಾಗಿರತಕ್ಕವರ ಸಂಖ್ಯೆ ಎಷ್ಟು;

(c) ಲಕ್ಕವಳ್ಳಿಯಲ್ಲಿ ವಾಸಮಾಡತಕ್ಕ ಕಾರ್ಮಿಕರಿಗೆ ಒದಗಿಸಿರತಕ್ಕ ಸೌಕರ್ಯಗಳು ಯಾವುವು, ಮತ್ತು ಆ ಸಂದರ್ಭದಲ್ಲಿ ತಗಲತಕ್ಕ ವೆಚ್ಚವೆಷ್ಟು; (ಸಂಗತಿಗಳನ್ನು ಆಯಾ ಶಿರೋನಾಮೆಗಳ ಕೆಳಗೆ ಒದಗಿಸಬೇಕೆಂದು ಪ್ರಾರ್ಥನೆ).

(d) ಕಾರ್ಮಿಕರ ವಸಾಹತದ (ಎಂದರೆ "ಲೇಬರ್ ಕಾಲೋನಿ"ಯ) ರಚನೆಯ ಸಂಬಂಧದಲ್ಲಿ ಆದ ವೆಚ್ಚವೆಷ್ಟು; ಮತ್ತು ಎಡದಡದ ಮೇಲಿರತಕ್ಕ ವಸಾಹತದ ಸಂಬಂಧದಲ್ಲಿ ಕಾರ್ಮಿಕರಿಗೆ ಸೌಕರ್ಯಗಳನ್ನು ಕಲ್ಪಿಸುವುದಕ್ಕಾಗಿ ಖರ್ಚಾದ ಮೊಬಲಗೆಷ್ಟು; (ಸಂಗತಿಗಳನ್ನು ಆಯಾ ಶಿರೋನಾಮೆಗಳ ಕೆಳಗೆ ತಿಳಿಸಬೇಕೆಂದು ಪ್ರಾರ್ಥನೆ).

(e) ಕಾರ್ಮಿಕರ ವಸಾಹತವು, ಅನಾರೋಗ್ಯಕರವಾದ ಪ್ರದೇಶದಲ್ಲಿರುವುದೆಂದು ಜನಾರೋಗ್ಯ ರಕ್ಷಣಿ ಇಲಾಖೆಯವರು ಹೇಳಿದರೆ;

(f) ಅನಾರೋಗ್ಯಕರವಾಗಿದೆಯೆಂಬುದಾಗಿ ಹೇಳಿರತಕ್ಕ ಪ್ರದೇಶದಲ್ಲಿಯೇ ಷೆಡ್ಡುಗಳನ್ನೂ ಮತ್ತು ಮನೆಗಳನ್ನೂ ಕಟ್ಟಬೇಕೆಂದು ಪಬ್ಲಿಕ್ ವರ್ಕ್ಸ್ ಇಲಾಖೆಯ ಅಧಿಕಾರಿಗಳು ಒತ್ತಾಯಪಡಿಸುತ್ತಿರುವ ವಿಚಾರವು ಸರ್ಕಾರದವರ ಗಮನಕ್ಕೆ ಬಂದಿದೆಯೆ;

(g) ಪ್ರಧಾನ ನಡವರು, ಆ ಡಿಸ್ಟ್ರಿಕ್ಟಿನಲ್ಲಿ ಪ್ರವಾಸಮಾಡಿದ ಕಾಲದಲ್ಲಿ ಕಟ್ಟಡಗಳನ್ನೂ ಮತ್ತು ವಾಸದ ಮನೆಗಳನ್ನೂ ಬಲದಡದ ಮೇಲೆ—ಎಂದರೆ ಲಕ್ಕವಳ್ಳಿ ಕಡೆಗೆ ಕಟ್ಟಬೇಕೆಂದು ಸ್ಥಳೀಯ ಅಧಿಕಾರಿಗಳಿಗೆ ಸಲಹೆ ಮಾಡಲಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಶಾಖೆಯ ಸಚಿವರು).—

ಉತ್ತರ.—(a) ವಯಸ್ಕರು 8,300 ಮಂದಿ. ಮಕ್ಕಳು 2,040 ಮಂದಿ. (ಇರಾಖೆಯವರಿಂದ ನೇಮಕ ಮಾಡಿಕೊಳ್ಳಲ್ಪಟ್ಟಿರತಕ್ಕ ಕಾರ್ಮಿಕರಲ್ಲದೆ ಈ ಸಂಬಂಧದಲ್ಲಿ ಇಟ್ಟಿರತಕ್ಕ ಅಂಕಿ ಅಂಶಗಳಿಗನುಗುಣವಾಗಿ "ಪೀಸ್-ವರ್ಕ್" ಆಧಾರದ ಮೇಲೆ ಕೆಲಸ ಮಾಡತಕ್ಕ ಕಾರ್ಮಿಕರೂ ಸೇರಿ).

(b) ಎಷ್ಟು ಜನರು ವಾಸಮಾಡುತ್ತಿದ್ದಾರೆಂಬುದಕ್ಕೆ ಸಂಬಂಧಪಟ್ಟ ಸರಿಯಾದ ಸಂಖ್ಯೆಯನ್ನು ವಿಚಾರಿಸಿ ನಿರ್ಧರಿಸಬೇಕಾಗಿದೆ.

(c) ಕಾಮಗಾರಿಗಳನ್ನು "ಪೀಸ್-ವರ್ಕ್" ಪದ್ಧತಿಯ ಮೇಲೆ ನಡೆಸಲಾಗುತ್ತಿದೆ. ಕಾರ್ಮಿಕರನ್ನು "ಪೀಸ್-ವರ್ಕ್" ಕೆಲಸ ನಡೆಯಿಸತಕ್ಕವರೇ ಒದಗಿಸುತ್ತಾರೆ. "ಪೀಸ್-ವರ್ಕ್" ಮಾಡತಕ್ಕವರು ಕಂಟ್ರಾಕ್ಟರುಗಳನ್ನು ಹೋಲುವುದರಿಂದ ಕಾರ್ಮಿಕರಿಗೆ ಸೌಕರ್ಯಗಳನ್ನು ಒದಗಿಸುವ ಕರ್ತವ್ಯವು "ಪೀಸ್-ವರ್ಕ್" ಕೆಲಸ ನಡೆಸತಕ್ಕವರಿಗೆ ಸೇರಿದ ಜವಾಬ್ದಾರಿಯಾಗಿದೆ.

(d) ಮಣ್ಣಿನ ಕೆಲಸವನ್ನು ಮಾಡತಕ್ಕ ಕಾರ್ಮಿಕರು ಹಂಗಾಮಿ ಕೆಲಸಗಾರರಾಗಿರುವುದರಿಂದಲೂ ಮತ್ತು "ಪೀಸ್-ವರ್ಕ್" ಕೆಲಸಗಾರರೂ ಆಗಿರುವ ಪ್ರಯುಕ್ತ, ಕಾರ್ಮಿಕರ ವಸಾಹತ ರಚನೆಯ ಮತ್ತು ಅವರಿಗೆ ಸೌಕರ್ಯಗಳನ್ನೊದಗಿಸುವ ವಿಚಾರವೇ ಏಳುವುದಿಲ್ಲ.

(e) ಕಾರ್ಮಿಕರು ತಮ್ಮ ಸ್ವಂತ ಇಚ್ಛೆಯ ಮೇಲೆಯೇ ಅಲ್ಲಿ ನೆಲಸಿದರು. ಅವರು ನೆಲಸಿರತಕ್ಕ ಪ್ರದೇಶವು, ಕಾಮಗಾರಿಗಳಿಗೂ ಮತ್ತು ನಿರಾಶ್ರಿತರ ಷೆಡ್ಡುಗಳಿಗೂ ಸಮೀಪದಲ್ಲಿರುವುದೇ ಅದಕ್ಕೆ ಕಾರಣ.

(f) ಇಲ್ಲ.

(g) ಇಲ್ಲ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಲಕ್ಕವಳ್ಳಿ ಪ್ರಾಜೆಕ್ಟು ಪ್ರಾರಂಭವಾದಾಗ ಅದರ ಜೊತೆಯಲ್ಲೇ ತಾವು ಕೂಲಿಗಾರರ ಕಾಲೋನಿಯನ್ನು ಪ್ರಾರಂಭ ಮಾಡಿದಿರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಇಲ್ಲಿ ಮಾಡಲಿಲ್ಲವೆಂದು ಹೇಳಿದ್ದೀರಲ್ಲಾ!

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈಗ ಉತ್ತರ ಹೇಳಿದ್ದೇನೆ. ಮುಂದಿನ ಪ್ರಶ್ನೆ ಕೇಳಬಹುದು.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಈ ಲೇಬರ್ ಕಾಲೋನಿಗೆ ಎಷ್ಟು ಖರ್ಚು ಮಾಡಿದ್ದೀರಿ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಿರ್ದಿಷ್ಟವಾಗಿ ಖರ್ಚು ಮಾಡಿರುವುದನ್ನು ಹೇಳಬೇಕಾದರೆ ನೋಟೀಸ್ ಬೇಕು.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಲಕ್ಕವಳ್ಳಿ ಪ್ರಾಜೆಕ್ಟಿನಲ್ಲಿ ಕೆಲಸ ಮಾಡುತ್ತಿರತಕ್ಕ ಕೂಲಿಗಾರರು ಲಕ್ಕವಳ್ಳಿಯಲ್ಲೂ ವಾಸಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು, ಲಕ್ಕವಳ್ಳಿಯಲ್ಲೂ ಇದ್ದಾರೆ, ಅದರ ಸುತ್ತಮುತ್ತಣ ಹಳ್ಳಿಗಳಲ್ಲೂ ಇದ್ದಾರೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಲಕ್ಕವಳ್ಳಿ ಎಡಭಾಗದ ಕಾಲೋನಿಗೆ ಮತ್ತು ಲಕ್ಕವಳ್ಳಿ ಊರಿಗೆ ತಾವೇನಾದರೂ ಸೌಕರ್ಯಗಳನ್ನು ಒದಗಿಸಿ ಕೊಟ್ಟಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಲಕ್ಕವಳ್ಳಿ ಊರಿಗೂ ನಮಗೂ ಸಂಬಂಧವಿಲ್ಲ. ಈ left bank ಕಾಲೋನಿಗೆ ಕೊಟ್ಟಿರುವುದಲ್ಲದೆ ಲಕ್ಕವಳ್ಳಿಯ ಕಾಲೋನಿಗೆ ಕೂಡ ಎಲ್ಲಾ ಸೌಕರ್ಯಗಳನ್ನೂ ಕೊಟ್ಟಿದ್ದೇವೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಆ ಲೇಬರ್ ಕಾಲೋನಿಯ ಜನಸಂಖ್ಯೆ ಜಾಸ್ತಿಯೋ ಅಥವಾ ಲಕ್ಕವಳ್ಳಿಯ ಜನಸಂಖ್ಯೆ ಜಾಸ್ತಿಯೋ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಜನಸಂಖ್ಯೆಯ ಲೆಕ್ಕ ತೆಗೆದುಕೊಂಡಿಲ್ಲ. ಸಾಮಾನ್ಯವಾಗಿಯೇ ಲಕ್ಕವಳ್ಳಿ ದೊಡ್ಡ ಊರು. ಅಲ್ಲಿನ ಜನಸಂಖ್ಯೆ ಜಾಸ್ತಿಯಿರಬೇಕು.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—Left Bank ಕಾಲೋನಿಗೆ ರಸ್ತೆ, ಚರಂಡಿ ಮುಂತಾದುವುಗಳನ್ನು ಮಾಡಿಸುವುದಕ್ಕೆ ಖರ್ಚು ಮಾಡಿರುವುದು 16-17 ಸಾವಿರದಷ್ಟಾಗುತ್ತದೆಯಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಷ್ಟೋ ಖರ್ಚು ಮಾಡಿದ್ದಾರೆ; ನೋಟೀಸ್ ಕೊಟ್ಟರೆ ಹೇಳುತ್ತೇನೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಇದರಲ್ಲಿ ಕಾಲುಭಾಗವನ್ನು ಕೂಡ ಲಕ್ಕವಳ್ಳಿಯಲ್ಲಿ ವಾಸವಾಗಿರುವ ಲಕ್ಕವಳ್ಳಿ ಪ್ರಾಜೆಕ್ಟಿನಲ್ಲಿ ಕೆಲಸ ಮಾಡುತ್ತಿರುವವರಿಗಾಗಿ ಖರ್ಚುಮಾಡಿಲ್ಲ ಅಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೀವು ಹೇಳುವಂತೆ ಕಡ್ಡಿ ಎರಡು ತುಂಡು ಮಾಡುವಂತೆ ಇದನ್ನೆಲ್ಲಾ ಮಾಡುವುದಕ್ಕಾಗುವುದಿಲ್ಲ. ಇಲ್ಲಾದರೋ ಹೊಸದಾಗಿ ಲೇಬರ್ ಕಾಲೋನಿ ಮಾಡಿದೆ. ಅದಕ್ಕೆ ಬೇಕಾದ ಎಲ್ಲಾ ಸೌಕರ್ಯಗಳನ್ನೂ ಒದಗಿಸಿ ಕೊಡುವುದಕ್ಕಾಗಿ ಸ್ವಲ್ಪ ಹಣ ಖರ್ಚು ಮಾಡಿದೆ. ಆದರೆ ಲಕ್ಕವಳ್ಳಿ ಹೊದಲಿನಿಂದ ಇದ್ದ ಊರು. ಅಲ್ಲಿಗೂ ಕೆಲವು ಸೌಕರ್ಯಗಳನ್ನು ಒದಗಿಸಿ ಕೊಡುವುದಕ್ಕಾಗಿ ಹಣ ಕೊಟ್ಟಿದೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಏನೇನು ಸೌಕರ್ಯಗಳನ್ನು ಒದಗಿಸಿ ಕೊಟ್ಟಿದ್ದೀರಿ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೀರು ನರ ಬರಾಯಿಗೆ ಏರ್ಪಾಡು ಮಾಡಿದ್ದೇವೆ. ಅಲ್ಲದೆ, ಮೊನ್ನೆ ತಾನೆ ಅಲ್ಲಿನ ಡ್ರೈನೇಜು ಮುಂತಾದುವುಗಳನ್ನು ಸರಿ ಮಾಡಿ ಊರನ್ನು ಚೊಕ್ಕಟ ಮಾಡುವುದಕ್ಕಾಗಿ ನಮ್ಮ ಸಿಬ್ಬಂದಿಯನ್ನೇ ಕಳುಹಿಸಿಕೊಟ್ಟು ಸಹಾಯ ಮಾಡಿದ್ದೇವೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಲಕ್ಕವಳ್ಳಿಗೆಲ್ಲಾ ಎರಡೇ ನಲ್ಲಿಗಳನ್ನು ಕೊಟ್ಟಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇನ್ನೂ ಜಾಸ್ತಿ ಕೊಡಲಕ್ಕೆ ಹೇಳಿದ್ದೇನೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಅಲ್ಲಿನ ಸ್ಯಾನಿಟೇಷ್ ಸ್ವಲ್ಪವೂ ಸರಿಯಾಗಿಲ್ಲವೆಂಬುದು ತಮಗೆ ಗೊತ್ತಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸೌದು ಅಲ್ಲಿ ಸ್ವಲ್ಪ conjestion ಇತ್ತು. ಅದನ್ನೆಲ್ಲಾ ತೆಗೆದು ಸರಿಯಾಗಿ ಚೊಕ್ಕಟ ಮಾಡಬೇಕೆಂದು ಹೇಳಿ ನಮ್ಮ ಇಲಾಖೆಯವರನ್ನೇ ಕಳುಹಿಸಿ ಕೊಟ್ಟಿದ್ದೇವೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಲಕ್ಕವಳ್ಳಿ ಗ್ರಾಮದಲ್ಲಿರತಕ್ಕ ಜನರು ವಾಸಮಾಡುವ ಸ್ಥಳಕ್ಕೂ ಮತ್ತು ಈ ಲೇಬರ್ ಕಾಲೋನಿಯು, ಅದೇ ಗ್ರಾಮ ನರಹದ್ದಿನಲ್ಲಿ ಇದ್ದು ಎಷ್ಟು ದೂರದಲ್ಲಿರುತ್ತೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಮ್ಮ ಪ್ರಶ್ನೆ ಅರ್ಥವಾಗಲಿಲ್ಲ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಲಕ್ಕವಳ್ಳಿ ಗ್ರಾಮಕ್ಕೂ ಮತ್ತು ಅದೇ ಗ್ರಾಮ ಸರಹದ್ದಿನಲ್ಲಿ ರತಕ್ಕ ಲೇಬರ್ ಕಾಲೋನಿಗೂ ಸುಮಾರು ಎಷ್ಟು ಫರ್ಲಾಂಗ್ ಆಗಬಹುದು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬಹಳ ಸಮೀಪ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಏನು 50 ಗಜಗಳಾಗಬಹುದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸುಮಾರು ಒಂದು ಫರ್ಲಾಂಗ್ ಇರಬಹುದು.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಕಾಲೋನಿಗೆ ಕೊಟ್ಟಿರತಕ್ಕ ಎಲೆಕ್ಟ್ರಿಕ್ ಲೈಟ್‌ನ್ನು ಆ ಗ್ರಾಮದವರಿಗೂ ಮುಂದುವರಿಸಲಾಗುತ್ತದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಗುತ್ತದೆ.

ಶ್ರೀ ಕೆ. ಎಚ್. ಮುದಿಯಪ್ಪನವರು (ಚಿಕ್ಕಮಗಳೂರು ಜಿಲ್ಲೆ).—ಈಗ ಅಲ್ಲಿ ಸರ್ಕಾರದವರು ಕಟ್ಟಿಸಿರತಕ್ಕ ಕಾಲೋನಿ ಯಾವ ಜಿಲ್ಲೆಗೆ ಸೇರಿದ್ದು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನದಿಯ ಆಚೆಯ ದಡದಲ್ಲಿರತಕ್ಕದ್ದೆಲ್ಲಾ ಶಿವಮೊಗ್ಗಾ ಜಿಲ್ಲೆಗೆ ಸೇರಿದೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಈ ಕೂಲಿಗಾರರು ಮಾಡತಕ್ಕ ಸ್ಥಳಕ್ಕೂ ಮತ್ತು ಊರಿಗೂ ಎಷ್ಟು ಫಾಸಲೆಯಾಗಬಹುದು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸುಮಾರು ಒಂದು ಅಥವಾ ಒಂದೂವರೆ ಫರ್ಲಾಂಗ್ ಆಗಬಹುದು.

ಶ್ರೀ ಕೆ. ಎಚ್. ಮುದಿಯಪ್ಪನವರು.—ಲಕ್ಕವಳ್ಳಿಯಲ್ಲಿ ಸ್ಯಾನಿಟೆರಿ ಕಂಡೀಷ್ಟ್ ಚೆನ್ನಾಗಿಲ್ಲವೆಂದು, ಅದಕ್ಕೆ ಸರಿಯಾದ ನಿಗಾ ಕೊಡುತ್ತಿಲ್ಲವೆಂದು ತಾನೆ ಈಗ ಹೊಸ ಜಾಗ ಮಾಡಿರುವುದು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೆಲವು ಜನರು ಲಕ್ಕವಳ್ಳಿಯಲ್ಲೂ ಇದ್ದಾರೆ. ಕೆಲವರು ಆ ಹೊಸದಾಗಿ ಮಾಡಿರತಕ್ಕ ಕಾಲೋನಿಯಲ್ಲೂ ಇದ್ದಾರೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಹಾಗಾದರೆ ಈಗ ಲಕ್ಕವಳ್ಳಿಯಲ್ಲಿರತಕ್ಕ ಜನಸಂಖ್ಯೆ ಎಷ್ಟು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈಗ ಆ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಆ ಕೂಲೀ ಜನರು ಮೊದಲು ಬಂದಾಗ ಎಲ್ಲಿದ್ದರು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅವರು ಮೊದಲು ಬಂದಾಗ ಎಲ್ಲಿದ್ದರೆಂಬುದನ್ನು ಹೇಳುವುದಕ್ಕಾಗುವುದಿಲ್ಲ. ಈಗ ಅಲ್ಲಿ ಹೊಸದಾಗಿ ಒಂದು ಕಾಲೋನಿಯನ್ನು ಕಟ್ಟಲಾಗಿದೆ. ಯಾರು ಮಹನೀಯರು ಬೇಕಾದರೂ ಅಲ್ಲಿ ಬಂದು ಇರಬಹುದು. ಅಲ್ಲಿ ಸಾಧಾರಣವಾಗಿ ಎಲ್ಲಾ ಸೌಲಭ್ಯಗಳನ್ನು ಒದಗಿಸಿದ್ದೇವೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಈ ಕಾಲೋನಿಯನ್ನು ಕೂಲಿ ಜನರು ಬಂದ ನಂತರ ಕಟ್ಟಿಸಿದಿರೋ ಅಥವಾ ಬರುವುದಕ್ಕೆ ಮುಂಚೆಯೇ ಕಟ್ಟಿಸಿದ್ದಿರೋ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಯೋಜನೆ ಸಿದ್ಧವಾಗಿತ್ತು. ಅವರೆಲ್ಲ ಬಂದ ನಂತರ ಕಟ್ಟಲಾಯಿತು ; ಅಲ್ಲಗೆ ಬೇಕಾಗತಕ್ಕ ಅನುಕೂಲಗಳೆಲ್ಲವನ್ನೂ ಕೊಟ್ಟಿದ್ದೇವೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಹೊಸದಾಗಿ ಕಟ್ಟಿರತಕ್ಕ ಕಾಲೋನಿಗೂ ಲೆಫ್ಟ್‌ಬ್ಯಾಂಕ್ ಫಾನಲ್‌ಗೂ ಎಷ್ಟು ದೂರವಾಗುತ್ತೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಷ್ಟೇ ದೂರ ವಾಗುತ್ತೆಂಬುದನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಲಕ್ಕವಳ್ಳಿ ಪಕ್ಕದಲ್ಲೇ ಈ ಒಲಭಾಗದ ಫಾನಲ್ ಹೋಗುವಂತೆ ಮಾಡಿರುವುದರಿಂದ ಆ ಸ್ಥಳ ಸಂಪೂರ್ಣ ಜಾಗಿನಿಂದ ಕೂಡಿ, ವಾಸಕ್ಕೆ ಅನಾನುಕೂಲವಾಗಿರುತ್ತೆಂಬುದನ್ನು ಒಪ್ಪುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ. ಅಲ್ಲಿಯೂ ಕೂಡ ವಾಸಕ್ಕೆ ಯೋಗ್ಯವಾಗಿರುತ್ತೆಂದು ತಿಳಿದು ಬಂದಿದೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಹೆಲ್ತ್ ಇಲಾಖೆಯವರ ಅಭಿಪ್ರಾಯವನ್ನು ಈ ಬಗ್ಗೆ ಪಡೆದುಕ್ಕೊಂಡಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಪಡೆಯಲಾಗಿದೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಆದು ವಾಸಕ್ಕೆ ಯೋಗ್ಯವಾದ ಸ್ಥಳವೆಂದು ತಿಳಿಸಿದ್ದಾರೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಿಳಿಸಿದ್ದಾರೆ. ಅದಕ್ಕೆ ಎಲ್ಲ ರಕ್ಷಣೆಗಳನ್ನೂ ಮಾಡಿದ್ದೇವೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಅದು ವಾಸಕ್ಕೆ ಅನಾರೋಗ್ಯವಾದ ಸ್ಥಳವಾದ್ದರಿಂದ ಜನರನ್ನು ಅಲ್ಲಿ ವಾಸಮಾಡಲು ಹೋಗದಂತೆ ತಡೆಗಟ್ಟಬೇಕಾದ್ದು ಸರ್ಕಾರದವರ ಕರ್ತವ್ಯವಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಗೆ ಮಾಡಲು ಸಾಧ್ಯವಿಲ್ಲ. ಏತಕ್ಕೆಂದರೆ ಮೂಲಭೂತ ಹಕ್ಕುಗಳಿಗೆ ವಿರೋಧಪಡಿಸಿದಂತಾಗುತ್ತದೆ. ಯಾರು ಬೇಕಾದರೂ ಬಂದು ಅಲ್ಲಿ ವಾಸಮಾಡಬಹುದು. ಹಾಗೆ ಹೋಗಕೂಡದೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಅಂಥಾ ಅನಾರೋಗ್ಯ ಕರವಾದ ಸ್ಥಳದಲ್ಲಿ ಜನರು ವಾಸಮಾಡಲು ಅನುಮತಿ ಕೊಟ್ಟಿರುವುದು ಸರ್ಕಾರದವರ ತಪ್ಪಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ವಾಸಕ್ಕೆ ಅನಾರೋಗ್ಯಕರವಾದ ಸ್ಥಳವೆಂದು ಯಾರೂ ತಿಳಿಸಿಲ್ಲ. ಹೆಲ್ತ್ ಇಲಾಖೆಯವರು ಅದು ಆರೋಗ್ಯಕರವಾದ ಸ್ಥಳವೆಂದೇ ನನಗೆ ತಿಳಿಸಿದ್ದಾರೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಈ ಬಗ್ಗೆ ಹೆಲ್ತ್ ಆಫೀಸರ ಅಭಿಪ್ರಾಯ ಪಡೆದಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈಗ ತಾನೆ ತಿಳಿಸಿದ್ದೇನೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಅದೇ ಹೆಲ್ತ್ ಆಫೀಸರು ನನಗೆ ಬರೆದಿರುವ ಎಂಡಾರ್ಸ್‌ಮೆಂಟಿನಲ್ಲಿ ಅದು ಅನಾರೋಗ್ಯಕರವಾದ ಸ್ಥಳವೆಂದು ತಿಳಿಸಿರತಕ್ಕ ಅಂಶವನ್ನು ತಮ್ಮ ಗಮನಕ್ಕೆ ತರಬಹುದೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಖಾನಗೀ ಜನರಿಗೆ ಕೊಟ್ಟಿರತಕ್ಕ ಅಭಿಪ್ರಾಯಕ್ಕೆ ಇಲಾಖೆಯವರಿಗೆ ಕೊಟ್ಟಿರತಕ್ಕ ಅಭಿಪ್ರಾಯಕ್ಕೆ ತಾಳೆ ಹಾಕಲು ಆಗುವುದಿಲ್ಲ, ನಮಗೇನು ತಿಳಿಸಿದ್ದರೋ ಅದೇ ಮುಖ್ಯ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಹಾಗಾದರೆ ಖಾನಗೀಯವರಿಗೇ ಒಂದು ತರಹ ಉತ್ತರ ಮತ್ತು ಸರ್ಕಾರದವರಿಗೇ ಒಂದು ತರಹ ಉತ್ತರವೆಂದ ಇದೆಯೇನು?

ಅಧ್ಯಕ್ಷರು.—ಅದು ಸರಿಯಾದ ಉಪ ಪ್ರಶ್ನೆ ಅಲ್ಲ.

ಈಗ 232ನೆಯ ಪ್ರಶ್ನೆಯನ್ನು ತೆಗೆದುಕೊಳ್ಳಲಾಗುತ್ತದೆ.